ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
Office No. +91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಸಂಖ್ಯೆ: ರಾವಿರಾ/ಪರೀಕ್ಷಾ/ಯು.ಜಿ–I/ಮರುಮೌಲ್ಯಮಾಪನ/2022–23/313 ದಿನಾಂಕ:22.02.2023

**ಮರುಮೌಲ್ಯಮಾಪನ ಅಧಿಸೂಚನೆ**

ವಿಷಯ: 2021–22 ನೇ ಸಾಲಿನ ಸ್ನಾತಕ(UG) ಪ್ರಥಮ ಸೆಮಿಸ್ಟರ್‌ನ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.02.2023

*****

ರಾಯಚೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತಹ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿರುವ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಎಲ್ಲಾ 2021–22 ನೇ ಸಾಲಿನ ಸ್ನಾತಕ(UG) ಕೋರ್ಸ್‌ಗಳ ಪ್ರಥಮ ಸೆಮಿಸ್ಟರ್‌ನ ಪರೀಕ್ಷಾ ಫಲಿತಾಂಶವನ್ನು ಈಗಾಗಲೇ UUCMS ನಲ್ಲಿ ಪ್ರಕಟಿಸಲಾಗಿದೆ. ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಅರ್ಜಿಗಳನ್ನು ಸಲ್ಲಿಸ ಬಯಸುವ ವಿದ್ಯಾರ್ಥಿಗಳು ತಮ್ಮ UUCMS ಪೋರ್ಟಲ್ ಮುಖಾಂತರ ಅರ್ಜಿಗಳನ್ನು ಹಾಗೂ ಶುಲ್ಕವನ್ನು ಭರಿಸಿ ತಮ್ಮ ಮಹಾವಿದ್ಯಾಲಯದ ಪ್ರಾಂಶುಪಾಲರುಗಳ ಮುಖಾಂತರ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಮರುಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವವರು ವಿಷಯದ ಪ್ರತಿ ಪತ್ರಿಕೆಗೆ ಈ ಕೆಳಗೆ ನಮೂದಿಸಿದಂತೆ ಶುಲ್ಕ ಭರಿಸಬೇಕು.

| Course | Re-Valuation |
|---|---|
| BA/BBM /BCom(Without Practical) | Rs.1,000/- Per paper |
| BCA/B.Sc(With Practical) | Rs.1,500/- Per paper |

**ಸೂಚನೆ:**

1. UUCMS ಪೋರ್ಟಲ್‌ನಲ್ಲಿ ಮರುಮೌಲ್ಯಮಾಪನ ಅರ್ಜಿ ಸಲ್ಲಿಸಲು ಆನ್‌ಲೈನ್‌ನಲ್ಲಿ ಮರುಮೌಲ್ಯಮಾಪನ ಆಯ್ಕೆ ಮಾಡಿಕೊಂಡು ಶುಲ್ಕ ಭರಿಸಬಹುದು. ಶುಲ್ಕ ಭರಿಸಿದ ಪ್ರತಿ ಹಾಗೂ ಆಯಾ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಅರ್ಜಿಯ ಜೊತೆ ಲಗತ್ತಿಸಿ ಸಲ್ಲಿಸತಕ್ಕದ್ದು.
2. ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **02.03.2023**
3. ಮೊದಲ ಮೌಲ್ಯಮಾಪನ ಮತ್ತು ಮರುಮೌಲ್ಯಮಾಪನದಲ್ಲಿ ಶೇಕಡಾ 15% ಕ್ಕಿಂತ ಮೇಲ್ಪಟ್ಟು ಅಂಕಗಳ ವ್ಯತ್ಯಾಸ ಕಂಡು ಬಂದರೆ ಸದರಿ ಪತ್ರಿಕೆಯನ್ನು ಮೂರನೇ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು.
4. ತಾಂತ್ರಿಕ ಸಮಸ್ಯೆಗಳ ಕಾರಣಗಳಿಂದ ಪ್ರಥಮ ಸೆಮಿಸ್ಟರ್‌ನ ಫಲಿತಾಂಶ ಪ್ರಕಟವಾಗದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಫಲಿತಾಂಶ ಪಾಸಾಗಿದಲ್ಲಿ ಮರುಮೌಲ್ಯಮಾಪನದ ಶುಲ್ಕವನ್ನು ಹಾಗೂ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಹಿಂದಿರುಗಿಸಲಾಗುವುದು.

5. ರಾಯಚೂರು ವಿಶ್ವವಿದ್ಯಾಲಯವು ಗುಲ್ಬರ್ಗಾ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಅನುಸರಿಸುವುದರಿಂದ ಈ ಬಾರಿ ಕೇವಲ ಮರುಮೌಲ್ಯಮಾಪನಕ್ಕೆ ಅರ್ಜಿಯನ್ನು ಕರೆಯಲಾಗಿದೆ. ಈ ಬಾರಿ ಗುಲ್ಬರ್ಗಾ ವಿಶ್ವವಿದ್ಯಾಲಯ ಮರುಮೌಲ್ಯಮಾಪನ ಪರೀಕ್ಷಾ ಅಧಿಸೂಚನೆ ಪ್ರಕಾರ ರಾಯಚೂರು ವಿಶ್ವವಿದ್ಯಾಲಯವು ಅಧಿಸೂಚನೆ ಹೊರಡಿಸಿದೆ.ಇದಕ್ಕೆ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು ಮತ್ತು ವಿದ್ಯಾರ್ಥಿಗಳು ಸಹಕರಿಸುವಂತೆ ಕೋರಲಾಗಿದೆ.

**ವಿಶೇಷ ಸೂಚನೆ:** ಕೊನೆಯ ದಿನಾಂಕ ಮುಗಿದ ಎರಡು ದಿನಗಳೊಳಗಾಗಿ ಆಯಾ ಕಾಲೇಜಿನ ಪ್ರಾರ್ಚಾಯರು ಎಲ್ಲ ವಿದ್ಯಾರ್ಥಿಗಳಿಂದ ಮಾಹಿತಿಯನ್ನು ಪಡೆದು ಕ್ರೂಢೀಕರಿಸಿ ಕುಲಸಚಿವರು(ಮೌಲ್ಯಮಾಪನ), ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಕಾರ್ಯಲಯಕ್ಕೆ ಸಲ್ಲಿಸತಕ್ಕದ್ದು.

**(ಪ್ರೊ. ಯರಿಸ್ವಾಮಿ ಎಂ.)**
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ಗೆ,**
ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಸದರಿ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

**ಪ್ರತಿಗಳು:**
1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಅವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಶೈಕ್ಷಣಿಕ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಕಛೇರಿ ಪ್ರತಿ.